ಕಂಪು

ಕನ್ನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘ ಉತ್ತರ ಟೆಕ್ಸಾಸ್

Mallige Kannada Assoc. of North Texas


# ಯುಗಾದಿ

# ಹಬ್ಬದ

# ಹಾರ್ದಿಕ ಶುಭಾಶಯಗಳು



# ಪರಿವಿಡಿ


| | | |
|---|---|---|
| ಅಧ್ಯಕ್ಷರ ಸಂದೇಶ | | ಶ್ರೀವತ್ಸ ರಾಮನಾಥನ್ |
| ಯುಗಾದಿ | ಲೇಖನ | ರೇಖಾ ಪ್ರಕಾಶ್ |
| ಬಂತೈ ಬಂತೈ ಯುಗಾದಿ | ಕವನ | ಕೆ.ಎಲ್.ಸುಬ್ಬಲಕ್ಷ್ಮಮ್ಮ |
| ಯುಗಾದಿ | ಕವನ | ಸಂಧ್ಯಾ ಹೊನ್ನವಳ್ಳಿ |
| ಹಳೆ ಬೇರು-ಹೊಸ ಚಿಗುರು | ಲೇಖನ | ಸಂಧ್ಯಾ ಹೊನ್ನವಳ್ಳಿ |
| ನದಿ ನೀರಿನ ಹರಿವು | ಕವನ | ಗುರುಪ್ರಸಾದ್ ವೆಂಕಟರಾಮು |
| ಇತಿಹಾಸದ ಉಪಯುಕ್ತ ಪಾಠಗಳು | ಲೇಖನ | ಹರಿಚರಣ್ ಮೈಲಾರಯ್ಯ |
| ಬೇರು-ಚಿಗುರು | ಕವನ | ಪೂರ್ಣಿಮಾ ಸುಬ್ರಹ್ಮಣ್ಯ |
| ರಜೆಯ ಮಜಾ | ಮಕ್ಕಳ ಚಿತ್ರಕಲೆ | ಅನಘ ಪ್ರಸಾದ್ |



# ಅಧ್ಯಕ್ಷರ ಸಂದೇಶ

ವತ್ಸ ರಾಮನಾಥನ್

ಮಲ್ಲಿಗೆ ಕನ್ನಡ ಸಂಘದ ಸದಸ್ಯರಿಗೆ ನನ್ನ ಪ್ರೀತಿಯ ಯುಗಾದಿ ಶುಭಾಶಯಗಳು,

.... ಹೊಸ ವರುಷಕೆ, ಹೊಸ ಹರುಷವ.. ಹೊಸತು ಹೊಸತು ತರುತಿದೆ .. ಎನ್ನುವ ಹಾಗೆ ಮಲ್ಲಿಗೆ ಕನ್ನಡ ಸಂಘವು ಪ್ರತಿ ವರ್ಷ ಹೊಸ ತರಹದ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುತ್ತಿದೆ. ಕರ್ನಾಟಕದ ಸುಗಮ ಸಂಗೀತ ಪ್ರಪಂಚದ ಸಾಮ್ರಾಟರಾದ ದಿ|| ಶ್ರೀ ಅನಂತಸ್ವಾಮಿಯವರ ಪುತ್ರಿಯರು ಶ್ರೀಮತಿ ಅನಿತಾ ಮತ್ತು ಶ್ರೀಮತಿ ಸುನೀತಾ ಅನಂತಸ್ವಾಮಿ ನಮ್ಮ ಯುಗಾದಿ ಕಾರ್ಯಕ್ರಮಕ್ಕೆ ಬಂದು ಅವರ ಸುಶ್ರಾವ್ಯ ಸಂಗೀತದಿಂದ ನಮ್ಮನ್ನು ಮನರಂಜಿಸಲಿದ್ದಾರೆ. ಕನ್ನಡ ಸಾಹಿತ್ಯ ಗೋಷ್ಠಿ ಸದಸ್ಯರಿಂದ ಹಳೆಗನ್ನಡದ ನಾಟಕ. ಎಲ್ಲ ಹೊಸ ಹೊಸ ತರಹದ ಕಾರ್ಯಕ್ರಮಗಳು...

ನಿಮ್ಮೆಲ್ಲರಿಗೂ ಈಗಾಗಲೇ ತಿಳಿದಿರುವ ಹಾಗೆ, ಹೊರನಾಡು ಕನ್ನಡಿಗರ ಅತಿ ದೊಡ್ಡ ಸಂಸ್ಥೆಯಾದ "ಅಮೆರಿಕಾ ಕನ್ನಡ ಕೂಟಗಳ ಆಗರ" - ಅಕ್ಕ, ಮಲ್ಲಿಗೆ ಕನ್ನಡ ಸಂಘದ ಜೊತೆಗೂಡಿ ನಮ್ಮ ಡಲ್ಲಾಸ್ ನಲ್ಲಿ ಅಕ್ಕ ಸಮಾವೇಶವನ್ನು ನಡೆಸುತ್ತಿದ್ದಾರೆ. ಈ ಸಮಾವೇಶಕ್ಕೆ ಮೈಸೂರಿನ ಮಹಾರಾಜರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರು, ಪ್ರಖ್ಯಾತ ವಿಜ್ಞಾನಿ ಸಿ.ಎನ್. ಆರ್. ರಾವ್ ಮತ್ತು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರನ್ನು ಆಹ್ವಾನಿಸಲಾಗಿದೆ. ಅಕ್ಕ ಸಂಘದ ಪ್ರಮುಖರ ಜೊತೆಗೆ ಮಹಾರಾಜರನ್ನು ಆಹ್ವಾನಿಸಲು ಹೋಗುವ ಅವಕಾಶ ಭಾಗ್ಯ ನನಗೆ ಸಿಕ್ಕಿತ್ತು ಎಂದು ನಿಮಗೆ ತಿಳಿಸಲು ಸಂತೋಷವಾಗುತ್ತಿದೆ.

ಕಳೆದ ಒಂಬತ್ತು ಸಮಾವೇಶಗಳಿಗಿಂತ ವಿಭಿನ್ನವಾಗಿ, ವಿಜೃಂಭಣೆಯಿಂದ ಡಲ್ಲಾಸ್ ಕನ್ನಡ ಕುಟುಂಬದವರ ಮುಂದಾಳತ್ವದಲ್ಲಿ "ಅಕ್ಕರೆಯ ಹತ್ತು-ಸಾರ್ಥಕ ಹೊತ್ತು" ಎಂದು ಹತ್ತನೆಯ ಸಮಾವೇಶವನ್ನು ನಡೆಸಲು ನಿಮ್ಮೆಲ್ಲರ ಸಹಕಾರ ಬಹಳ ಅತ್ಯಗತ್ಯ. ಈ ಸಮಾವೇಶವನ್ನು ಯಶಸ್ವಿಯಾಗಿ ನಡೆಸಲು ನಿಮ್ಮ ತನು, ಮನ ಹಾಗು ಧನ ಸಹಾಯ ಬಹಳ ಮುಖ್ಯ. ನಮ್ಮ ಊರಿನಲ್ಲಿ ಇಂತಹ ಒಂದು ದೊಡ್ಡ ಕನ್ನಡ ಸಮಾವೇಶ ಇಲ್ಲಿಯವರೆಗೆ ನಡೆದಿಲ್ಲ, ಇನ್ನು ಮುಂದೆ ನಮಗೆ ಇಂತಹ ಅವಕಾಶ ಮತ್ತೆ ಯಾವಾಗ ದೊರೆಯುತ್ತದೆ ಎಂದು ಗೊತ್ತಿಲ್ಲ. ಅತ್ಯುನ್ನತ ಮಟ್ಟದಲ್ಲಿ ಈ ಸಮಾವೇಶವನ್ನು ನಡೆಸಲು ಹಣದ ವೆಚ್ಚ ಬಹಳ ಇರುವುದರಿಂದ, ನಾವೆಲ್ಲರೂ ನಮ್ಮ ಶಕ್ತ್ಯಾನುಸಾರ ಧನ ಸಹಾಯವನ್ನು ಮಾಡಿದ್ದಲ್ಲಿ ಹನಿ ಹನಿಗೂಡಿದರೆ ಹಳ್ಳ .. ತೆನೆ ತೆನೆಗೂಡಿದರೆ ಬಳ್ಳ ಎನ್ನುವಹಾಗೆ ಈ ವೆಚ್ಚವನ್ನು ಹಂಚಿಕೊಳ್ಳಬಹುದು. ದಯವಿಟ್ಟು ತುಂಬು ಹೃದಯದ ಔದಾರ್ಯತೆಯಿಂದ ಸಹಕಾರ ಮಾಡಿ ಎಂಬ ನನ್ನ ಮನವಿ. Registration package ತೆಗೆದುಕೊಂಡರೆ ನಿಮಗೆ ಹೋಟೆಲ್ room ಮತ್ತೆ VVIP ಸೀಟಿಂಗ್ ಹಾಗು ಸಮಾವೇಶಕ್ಕೆ ಬರುವ ಪ್ರಸಿದ್ಧ ವ್ಯಕ್ತಿಗಳ ಜೊತೆಯಲ್ಲಿ ಭೋಜನ ಮುಂತಾದ ವ್ಯವಸ್ಥೆಗಳು ಲಭ್ಯವಾಗುತ್ತದೆ. ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಿ ಸಹಕರಿಸಿ.

ಯುಗಾದಿ ಹಬ್ಬದ ಈ ಕಾರ್ಯಕ್ರಮದ ನಂತರ ನಾವೆಲ್ಲರೂ ಅಕ್ಕ ಸಮಿತಿ ಕೆಲಸಗಳಲ್ಲಿ ತೊಡಗಿಬಿಡುತ್ತೇವೆ, ಇನ್ನು ೫ ತಿಂಗಳು ಡಲ್ಲಾಸ್ ಕನ್ನಡ ಕುಟುಂಬದವರೆಲ್ಲರೂ ಒಟ್ಟಾಗಿ ಸೇರಿ, ಸಂತೋಷ ಸಂಭ್ರಮಗಳಿಂದ ಕಾರ್ಯನಿರ್ವಹಿಸೋಣ.. ಮಜಾ ಮಾಡೋಣ!

ವತ್ಸ ರಾಮನಾಥನ್

# ಯುಗಾದಿ



ರೇಖಾ ಪ್ರಕಾಶ್

"ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು , ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ". ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ಜಸವು ಜನ ಜೀವನಕೆ ಮಂಕುತಿಮ್ಮ ". ಒಂದು ಮರದ ಹಳೆಯ ಬೇರು ಆಳವಾಗಿ ಮಣ್ಣಿನೊಡನೆ ಬೆರೆತು ಅದರಿಂದ ಮೊಳೆಯುವ ಹೊಸ ಚಿಗುರಿನ ಸೊಬಗು ವರ್ಣಿಸಲಸಾಧ್ಯ. ಹಾಗೆಯೇ ನಮ್ಮ ಹಳೆಯ ತತ್ವವನ್ನು ಉಳಿಸಿ , ಹೊಸ ಯುಕ್ತಿಯಿಂದ ಕೂಡಿ ಪಾಲಿಸುವ ಧರ್ಮವಾಗಬೇಕು , ಆಗ ಆಗುವುದು " ಧರ್ಮವೇ ಜಯವೆಂಬ ದಿವ್ಯ ಮಂತ್ರ ". ಋಷಿಗಳ ಪುರಾತನ ಜ್ಞಾನದಿಂದ ಬೆಳಕಿನ ವಿಜ್ಞಾನದೆಡೆ ಮುನ್ನಡೆಯುವುದೇ ಈ ಕವನದ ತಾತ್ಪರ್ಯ . ಹಾಗೆಯೇ " ಹಾಡು ಹಳೆಯದಾದರೇನು ಭಾವ ನವನವೀನ .ಹಳೆಯ ಹಾಡು ಹಾಡು ಮತ್ತೆ ಅದನೆ ಕೇಳಿ ತಣಿಯುವೆ , ಹಳೆಯ ಹಾಡಿನಿಂದ ಹೊಸತು ಜೀವನ ಕಟ್ಟುವೆ. ಸುಪ್ರಸಿದ್ದ ಕವಿ ಬಿ.ಎಂ.ಶ್ರೀ .ಯವರ ಕವನ " ವಸಂತ ಬಂದ ಋತುಗಳ ರಾಜ ತಾ ಬಂದ. ಚಿಗುರನು ತಂದ ಹೆಣ್ಗಳ ಕುಣಿಸುತ ನಿಂದ , ಛಳಿಯನು ಕೊಂದ ಹಕ್ಕಿಗಳುಳಿಗಳೇ ಚೆಂದಾ , ಮಾವಿನ ಸೊಂಪು, ಮಲ್ಲಿಗೆ ಕಂಪು , ಗಾಳಿಯ ತಂಪು, ಜನಗಳ ಜಾತ್ರೆಯ ಗುಂಪು" ...ಈ ಎಲ್ಲಾ ಚಿಗುರ ಸಂಭ್ರಮಕ್ಕೆ ಕಾರಣವಾದದ್ದೇ ಬಲವಾದ ಶಕ್ತಿಯುತ ಹಳೆಯ ಬೇರು. ಹೊಸ ಜೀವನಕ್ಕೆ ಸ್ವಾಗತ ನೀಡುವ ಶಕ್ತಿಯೇ ನಮ್ಮ ಹಳೆಯ ಬೇರಿನಲ್ಲಿ. ಅಡಗಿದೆ.

ನಮ್ಮ ಹಿರಿಯರ ನಡೆ , ನುಡಿ, ಆಚಾರ, ವಿಚಾರ, ಜ್ಞಾನ ಭಂಡಾರವನ್ನು ಹಳೆಯ ಬೇರಿನಂತೆ ಗಟ್ಟಿಯಾಗಿ ಹಿಡಿದು , ನವ ತಾಂತ್ರಿಕ ವಿಜ್ಞಾನದ ಮುನ್ನಡೆಗೆ ಸಾಗಿದಾಗ, ಅದರ ದೀಪ ಜ್ಯೋತಿಯೇ ನವ ಪೀಳಿಗೆಗೆ ಮಾರ್ಗ ದರ್ಶನವಾಗುತ್ತದೆ . ಹಳೇ ಪೀಳಿಗೆಯ ಸುಜ್ಞಾನದ ಭಂಡಾರಕ್ಕೆ , ಯುವ ಪೀಳಿಗೆಯ ವಿಜ್ಞಾನದ ಕಿಡಿ ಬೆರೆತು , ಜಗ ಜ್ಯೋತಿಯು ಬೆಳಗಿ ಸೌಂದರ್ಯವನ್ನು ಹೆಚ್ಚಿಸುತ್ತದೆ. ನಮ್ಮ ವಸಂತ ಋತುವಿನ ಆಗಮನ ಹೇಗೆ ಪ್ರಕೃತಿಯಲ್ಲಿ ಸೊಬಗು ಮೂಡಿಸುತ್ತದೋ ಅದನ್ನು ನಮ್ಮ ಹಿರಿಯ ಕವಿ ಸಾಲು ಹೀಗೆ ವರ್ಣಿಸುತ್ತದೆ ...." ಮಾವು ಮಲ್ಲಿಗೆಗಳಲ ಬೀಡು , ಪಚ್ಚೆ ಹಸಿರು ಸುತ್ತ ಮುತ್ತ , ಹಸಿರು ಹುಲ್ಲು ಹೊತ್ತ ಹೊತ್ತ , ಈ ನಾಡು , ಏನು ಅಂದವೋ ಅಹಹ ಎನಿತು ಚಂದವೋ ". ಪ್ರಕೃತಿಯ ಸೌಂದರ್ಯವನ್ನು ಹೊರಸೂಸುವ ಹೊಸ ಚಿಗುರಿನ ಹಿಂದೆ ಅಡಗಿರುವ ಹಳೇ ಬೇರಿನ ಧೃಡತೆ , ತಾಯಿ ಮಗಳ ಸಂಬಂಧ ವಿದ್ದಂತೇ....ನೂಲಿನಂತೆ ಸೀರೆ , ತಾಯಿಯಂತೆ ಮಗಳು ಎನ್ನುವಂತೆ ,ಹಿಂದಿನ ಅಪಾರ ಸಂಸ್ಕೃತಿಯನ್ನು ಹೊತ್ತ ಬೇರು ತಾಯಿಯಂತೆ , ಹಸಿರುಟ್ಟು ಸಂಭ್ರಮಿಸಲು ಹೊರಟ ಚಿಗುರು ಮಗಳಂತೆ , ಹಿಂದಿನ ಪೀಳಿಗೆಯ ಸಂಸ್ಕಾರಗಳನ್ನು , ರೀತಿ ನೀತಿ ಧರ್ಮಗಳನ್ನು ಅರಿತು , ಮುಂದಿನ ಪೀಳಿಗೆ ಜನತೆಯ ಉದ್ಧಾರದ ಕಡೆಗೆ ಮುಖ ಮಾಡಿ ನಡೆಯುವುದೇ " ಹಳೆ ಬೇರು , ಹೊಸ ಚಿಗುರು ", ಪ್ರಕೃತಿಗೆ ಅಂಟಿದ ನಂಟು , ಎಂದರೆ ತಪ್ಪಾಗಲಾರದು.

ತಣ್ಣನೆಯ ಕೊರೆ ಕೊರೆವ ಚಳಿಯನ್ನು ದೂರಮಾಡಿ , ತಂಗಾಳಿಯ ಶುಭ್ರ ನೀಲಿಯ ಆಕಾಶದ ತಂಪು ವಾತಾವರಣದಲ್ಲಿ ಹಸಿರು ಚಿಗುರು ಹೊತ್ತು ಮೆರೆಯುತ್ತಿರುವ ವಸಂತ ಋತು , ಋತುಗಳ ಮಹಾರಾಜಾ .....ಹೊಸ ಚಿಗುರು ಬೇವನ್ನು ಹೊತ್ತು ತರುವ ಯುಗಾದಿ , ಯುಗಗಳ ಆದಿ.

" ಯುಗ ಯುಗಾದಿ ಕಳೆದರು ಯುಗಾದಿ ಮರಳಿ ಬರುತಿದೆ ". ವರ್ಷ ಕಳೆದಂತೆ ಕಾಲ ಬದಲಾಗುತ್ತಿದೆ , ಆದರೆ ಸಂಪ್ರದಾಯ, ಆಚಾರ, ವಿಚಾರ, ಮಾತ್ರ ಹೊಸ ರೂಪ ತಾಳಿ ಪುನರಾವರ್ತನೆಯಾಗುತ್ತದೆ. ಉತ್ತಮ ಅಡಿಪಾಯ ಭವ್ಯ ನೂತನ ಕಟ್ಟಡಕ್ಕೆ ಎಷ್ಟು ಮುಖ್ಯವಾಗುತ್ತದೋ , ಹಾಗೆಯೇ ಹೊಸ ಚಿಗುರಿಗೆ, ಹಳೆ ಬೇರಿನ ಶಕ್ತಿ , ಭದ್ರತೆ ಅಷ್ಟೇ ಮುಖ್ಯವಾಗುತ್ತದೆ. ಹಣ್ಣೆಲೆಗಳು ಉದುರಿ , ಹೊಸ ಚಿಗುರು ಗರಿಕೆದರಿ ಗಾಳಿಯಲ್ಲಿ ತೂಗುವುದಕ್ಕೆ ಸತ್ವ ಭರಿತ ಮಣ್ಣಿನಾಳದಲ್ಲಿ ಜೀವ ರಸ ಭರಿತವಾದ ಹಳೆ ಬೇರೇ ಸೃಷ್ಟಿಕರ್ತನಂತೆ ಆಗುತ್ತದೆ .

ನಮ್ಮೀ ಯುಗಾದಿಯು , ಹೊಸ ವರುಷದ, ಹೊಸ ಹರುಷವ, ಹಚ್ಚ ಹಸಿರು ಚಿಗುರು ಹೊತ್ತು, ಹೊಸ ದಾರಿಗೆ ದೀಪವಾಗಿ ನಮ್ಮೆಲ್ಲರನ್ನೂ ಕರೆದೊಯ್ಯಲಿ.

ಯುಗಾದಿಯ ಶುಭಾಶಯಗಳು.

ನಿಮ್ಮೆಲ್ಲರ ಆತ್ಮೀಯ ಗೆಳತೀ ,

ರೇಖಾ ಪ್ರಕಾಶ್.

## ಬಂತೈ ಬಂತೈ ಯುಗಾದಿ

ಕೆ. ಎಲ್. ಸುಬ್ಬಲಕ್ಷ್ಮಮ್ಮ

ಬಂತೈ ಬಂತೈ ಯುಗಾದಿ
ತಂತೈ ತಂತೈ ಹೊಸವರುಷವ, ಹೊಸ ಹರುಷವ,
ಪಲ್ಲವಿಸುತಿದೆ ಪ್ರಕೃತಿ ನವ ಚಿಗುರನು ಹೊತ್ತು
ಸಾರುತಿದೆ ಮಾನವನಿಗೆ ನವ ಜೀವನೋತ್ಸಾಹ ನಿನ್ನಯ ಸ್ವತ್ತು
ಎಲ್ಲೆಲ್ಲೂ ಹಚ್ಚಹಸುರಿನ ಮನೋಲ್ಲಾಸಗೊಳಿಸುವ
ಮಾವು ಬೇವುಗಳ ತೋರಣ
ಮನೆಮನೆಯಲ್ಲು ಘಮ ಘಮಿಸುತಿದೆ ಹೂರಣ
ಗೀತೆ ಇದನೇ ಸಾರುತಿದೆ ಸುಖ ದುಃಖ ಸಮೇಕೃತ್ವಾ
ಜೀವನ ಬೇವು ಬೆಲ್ಲಗಳ ಸಮ್ಮಿಶ್ರಣ
ಇದು ಸತ್ಯ ಇದು ಸತ್ಯ!
ಶಿವನ ಸ್ಮರಣೆ ಮಾಡು ನಿತ್ಯನಿತ್ಯ!!

## ಯುಗಾದಿ

ಸಂಧ್ಯಾ ಹೊನ್ನವಳ್ಳಿ

ಬಂದಿತು ಬಂದಿತು  ಶುಕ್ಲ ಪಕ್ಷದ ಪಾಡ್ಯದ ದಿನ
ಕಂಡಿತು ಎಲ್ಲೆಡೆ ಬೇವಿನ ಸೊಪ್ಪು ಮತ್ತು ಮಾವಿನ ತೋರಣ

ಚೇತೋಹಾರಿ ವಸಂತ ಋತುವಿನ ಪುನರಾಗಮನ
ಪ್ರಕೃತಿಯಲ್ಲಿ ನೋಡಲು ಎಲ್ಲವೂ ನೂತನ, ನವ ನವೀನ

ಎಲ್ಲೆಲ್ಲೂ ಸುಂದರ ವರ್ಣಮಯ ರಂಗೋಲಿಗಳು ಸೆಳೆಯಲು ಕಣ್ಮನ
ಮನೆಯವರೆಲ್ಲಾ ಹೊಸ ಬಟ್ಟೆ ತೊಡುವರು, ಮಾಡಿ ತೈಲಾಭ್ಯಂಜನ

ಪೂಜೆ ಆರತಿ ತೀರ್ಥದ ನಂತರ ಅತಿ ಮುಖ್ಯ ಬೇವು ಬೆಲ್ಲ ಸೇವನ
ಇನ್ನು ಕಾಯಲಸಾಧ್ಯ, ತಿನ್ನಲು ರುಚಿ ರುಚಿಯಾದ ಒಬ್ಬಟ್ಟು ಮಾವಿನಕಾಯಿ ಚಿತ್ರಾನ್ನ

ಸಾಯಂಕಾಲ ಪುಟ್ಟ ಮಕ್ಕಳಿಗೆ ಆರತಿ ತದನಂತರ ಪಂಚಾಂಗ ಪಠಣ ಶ್ರವಣ
ದೇವರು ಮತ್ತು ಗುರು ಹಿರಿಯರಿಗೆ ನಮನ ಹಾಗೂ ಬಾನಿನಲ್ಲಿ ಬಿದಿಗೆ ಚಂದ್ರನ ದರ್ಶನ

ಹೀಗಿರುತ್ತದೆ ನೋಡಿ ಹೊಸ ವರ್ಷಕ್ಕೆ ನಮ್ಮ ಪ್ರೀತಿ ತುಂಬಿದ ಆಹ್ವಾನ
ಸಂತಸ ಸಂಭ್ರಮ ತರುವುದು ನೋಡಿ ನಮ್ಮ ಯುಗಾದಿಯ ಆಗಮನ

# ಹಳೇ ಬೇರು - ಹೊಸ ಚಿಗುರು

ಸಂಧ್ಯಾ ಹೊನ್ನವಳ್ಳಿ

**"ಶತಾಯುರ್ವಜ್ರದೇಹಾಯಾ ಸರ್ವಸಂಪತ್ಕರಾಯಚ ಸರ್ವಾರಿಷ್ಠ ವಿನಾಶಾಯ ನಿಂಬಕಂದಳಭಕ್ಷಣಂ"** ಎಂದು ಹೇಳುತ್ತಾ ಬೇವು ಬೆಲ್ಲ ಹಂಚಿ ತಿಂದು, ಜೀವನದಲ್ಲಿ ಬರುವ ಸುಖ-ದುಃಖಗಳು, ಏರು-ಪೇರುಗಳು, ಸೋಲು-ಗೆಲುವುಗಳು, ಒಳಿತು-ಕೆಡುಕುಗಳು ಮತ್ತು ಹಿಗ್ಗು-ಕುಗ್ಗುಗಳನ್ನು ಸಮಾನ ರೀತಿಯಲ್ಲಿ ಸ್ವೀಕರಿಸುತ್ತಾ, ನೂರು ಕಾಲ ಆರೋಗ್ಯವಂತರಾಗಿ ಬಾಳಿರೆಂದು ಸಾರುವ ಹಬ್ಬ ಯುಗಾದಿ. ಪ್ರಕೃತಿದೇವಿಯ ಮಡಿಲಲ್ಲಿ ಕಾಣುವ ಹೊಸ ಎಲೆಗಳು, ಮೊಗ್ಗುಗಳು, ಬೀಸುವ ಹೊಸ ಗಾಳಿ, ಬೀರುವ ಹೊಸ ಹೊಂಗಿರಣ, ಭೃಂಗಗಳ ಗೀತೆ, ಹಕ್ಕಿಗಳ ಇಂಚರ, ಕೋಗಿಲೆಯ ಮಧುರ ಗಾನ, ಒಂದೇ ಎರಡೇ? ಎಲ್ಲವೂ ನಯನ ಮನೋಹರ, ಕರ್ಣಾನಂದಕರ. ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಗಿಡ ಮರಗಳ ಹಳೇ ಬೇರಿನಿಂದ ಹೊಸ ಚಿಗುರು ಮೂಡುವ ಸುಂದರ ಸಮಯ.

ಆದರೆ ಈ ಬೇರು, ಚಿಗುರು ಕೇವಲ ಗಿಡ ಮರಗಳಿಗೇ ಅನ್ವಯಿಸುವುದೇಕೆ? ಕೇವಲ ಯುಗಾದಿಯ ಸಮಯಕ್ಕೇ ಮೀಸಲೇಕೆ? ನಮ್ಮ ದಿನನಿತ್ಯದ ಜೀವನದಲ್ಲಿ, ನಮ್ಮ ಸುತ್ತಮುತ್ತಲಿನಲ್ಲೇ ನಡೆಯುವ ಎಷ್ಟೋ ಘಟನೆಗಳಲ್ಲಿ, ಒದಗುವ ಸಂದರ್ಭಗಳಲ್ಲಿ ನಾವು ಈ "ಹಳೇ ಬೇರು ಹೊಸ ಚಿಗುರಿನ" ಉದಾಹರಣೆಗಳನ್ನೂ, ಸಾದೃಶ್ಯಗಳನ್ನೂ ಖಂಡಿತ ಕಾಣಬಹುದು. ನಮ್ಮ ಬಾಳಿನ ಹಳೆಯ ನೆನಪುಗಳೇ ಹಳೇ ಬೇರುಗಳು. ನಮ್ಮ ನಾಳಿನ ಸುಂದರ ಕನಸುಗಳೇ ಹೊಸ ಚಿಗುರುಗಳು. ನಾವು ನಮ್ಮ ಹಿರಿಯರಿಂದ ಕಲಿತಿದ್ದೆಲ್ಲಾ ಹಳೇ ಬೇರು. ನಾವು ಕಲಿತಿದ್ದನ್ನು ನಮ್ಮ ಮಕ್ಕಳಿಗೆ ಹೇಳಿಕೊಟ್ಟು ಅವರು ಅದನ್ನು ಪಾಲಿಸಿದಾಗ ಅದು ಹೊಸ ಚಿಗುರು. ಅನಾದಿ ಕಾಲದಿಂದಲೂ ನಮ್ಮ ಋಷಿ ಮುನಿಗಳು ಬೋಧಿಸಿರುವ ಸಿದ್ಧಾಂತಗಳನ್ನೂ, ತತ್ವಗಳನ್ನು, ನೀತಿಗಳನ್ನೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವುಗಳಿಗೆ ಇಂದಿನ ವೈಜ್ಞಾನಿಕ ಜ್ಞಾನವನ್ನು ಅನ್ವಯಿಸಿ, ಯಶಸ್ವಿಯಾಗಿ ಬಾಳ್ವೆ ನಡೆಸುವುದು "ಹಳೇ ಬೇರು, ಹೊಸ ಚಿಗುರು" ಅಲ್ವೇ?

ದೃಢವಾಗಿ ಬೇರೂರಿದ ಹೆಮ್ಮರದಲ್ಲಿ ಪ್ರತಿ ವಸಂತದಲ್ಲೂ, ನೂರಾರು ಹಣ್ಣೆಲೆಗಳ ನಡುವೆ, ಹತ್ತಾರು ಚಿಗುರೆಲೆಗಳು ಕಾಣುವಾಗ, ಮುತ್ತಜ್ಜಿಯ ತೊಡೆಯ ಮೇಲೆ ಕೂತ ಮುದ್ದಾದ ಮರಿಮಗುವಿನ ಚಿತ್ರ ನೋಡಿದಾಗ, ಪ್ರೌಢತೆ ಮತ್ತು ಮುಗ್ಧತೆ ಇವೆರಡೂ ಅಕ್ಕಪಕ್ಕದಲ್ಲೇ ಕಂಡಾಗ ವಿಸ್ಮಯದಿಂದ ನನಗನ್ನಿಸಿದ್ದು "ಇದು ಖಂಡಿತ ಹಳೇ ಬೇರು, ಹೊಸ ಚಿಗುರು".

ಹೊಸ ಮದುಮಗಳು ತನ್ನ ಅಮ್ಮ, ಅಜ್ಜಿಯರಿಂದ ಕಲಿತ ನಳಪಾಕ ಮೊದಲಬಾರಿಗೆ ಇಳಿಸಿ, ಅದಕ್ಕೆ ಅನನ್ಯವಾಗಿ ನಾಮಕರಣ ಮಾಡಿ, ಹೊಚ್ಚ ಹೊಸ ಪರಿಯಲ್ಲಿ ತನ್ನ ಗಂಡನ ಮುಂದೆ ಸೊಗಸಾಗಿ ಪ್ರಸ್ತುತಪಡಿಸಿ ಹಿಗ್ಗಿದಾಗ, ತಕ್ಷಣ ನನಗನ್ನಿಸಿದ್ದು "ಇದೋ ನೋಡಿ ಹಳೇ ಬೇರು, ಹೊಸ ಚಿಗುರು".

ವಿದೇಶದಲ್ಲಿರುವ ಎಂಟು ವರ್ಷದ ತುಂಟ ಬಾಲಕ, ಶ್ರದ್ಧೆಯಿಂದ ವೇದ ಮಂತ್ರ ಪಠಣ ಮತ್ತು ಸಂಧ್ಯಾವಂದನೆ ಮಾಡುವುದನ್ನು ನೋಡಿದಾಗ, ಆಶ್ಚರ್ಯದಿಂದ ನನಗನ್ನಿಸಿದ್ದು "ಇದೇ ಅಲ್ವೇ ಹಳೇ ಬೇರು, ಹೊಸ ಚಿಗುರು".

ನಿರ್ಣಾಯಕ ಶಸ್ತ್ರಚಿಕಿತ್ಸೆ ಮಾಡಲು ಹೊರಡುವ ಮುನ್ನ, ಹೆಸರಾಂತ ವೈದ್ಯಕೀಯ ವಿಶ್ವವಿದ್ಯಾನಿಲಯಗಳಲ್ಲಿ ಓದಿ ಉತ್ತೀರ್ಣನಾಗಿರುವ ಯುವ ವೈದ್ಯ, ಗಣಪತಿ ವಿಗ್ರಹಕ್ಕೆ ನಮಿಸಿ ಆತ್ಮವಿಶ್ವಾಸದಿಂದ ಮುಂದೆ ಹೆಜ್ಜೆ ಇಡುವುದನ್ನು ಕಂಡಾಗ, ಸಂತೋಷದಿಂದ ನನಗನ್ನಿಸಿದ್ದು "ಇದು ಹಳೇ ಬೇರು ಹೊಸ ಚಿಗುರು ಅಲ್ದೇ ಮತ್ತೇನು?".

ಅತ್ಯಂತ ಉನ್ನತ ಮಟ್ಟದ ವಿಜ್ಞಾನಿಯು, ಅತಿ ಮುಖ್ಯವಾದ ಬಾಹ್ಯಾಕಾಶ ಉಪಗ್ರಹ ಉಡಾವಣೆಯ ದಿನದಂದು ತನ್ನ ತಾಯಿ ತಂದೆಯರ ಚರಣಸ್ಪರ್ಶ ಮಾಡಿ ಆಶೀರ್ವಾದ ಪಡೆದು ತನ್ನ ಕಾರ್ಯಸಿದ್ಧಿಯತ್ತ ಕಿರುನಗೆ ಹೊತ್ತು ಹೊರಟಾಗ, ನಿಸ್ಸಂಶಯವಾಗಿ ನನಗನ್ನಿಸಿದ್ದು "ಇದು ನೂರಕ್ಕೆ ನೂರು ಹಳೇ ಬೇರು, ಹೊಸ ಚಿಗುರು".

ಕಾರಣಾಂತರಗಳಿಂದ ಸ್ವದೇಶವನ್ನು ತೊರೆದು ವಿದೇಶಕ್ಕೆ ಬಂದು, ನಮ್ಮ ಡಾಲಸ್‌ನಂತಹ ಊರಿನಲ್ಲಿ ನೆಲೆಸಿರೋ ಯುವಪೀಳಿಗೆಯ ಕನ್ನಡಿಗರು "ಕನ್ನಡ ಸಾಹಿತ್ಯ ಗೋಷ್ಠಿ" ಸುಸೂತ್ರವಾಗಿ ನಡೆಸಿದಾಗ, ಉತ್ಸಾಹದಿಂದ ಕನ್ನಡ ಸಂಘವೆಂಬ ಸಸಿಯನ್ನು ನೆಟ್ಟು, ನೀರೆರೆದು ಪೋಷಿಸಿ ಹೆಮ್ಮರವಾಗಿ ಬೆಳೆಸಿ, ಮಲ್ಲಿಗೆಯ ಕಂಪನ್ನು ಎಲ್ಲೆಡೆ ಪಸರಿಸುತ್ತಿರುವಾಗ, ಕನ್ನಡ ನಾಡು, ಭಾಷೆ ಮತ್ತು ಸಾಹಿತ್ಯಗಳನ್ನು ಹಿರಿಯರು ಕಿರಿಯರು ಕೂಡಿ ಸಂಭ್ರಮದಿಂದ ಆಚರಿಸುತ್ತಿರುವಾಗ, ಹೆಮ್ಮೆಯಿಂದ ನನಗನ್ನಿಸಿದ್ದು ....... "ಇದುವೇ ಹಳೇ ಬೇರು, ಹೊಸ ಚಿಗುರು".

ಹಳೇ ಬೇರುಗಳಿಂದ ಕಲಿಯುವುದು ಬಹಳಷ್ಟಿದೆ. ಹೊಸ ಚಿಗುರುಗಳು ಚಿಗುರಲು ಯುಗಾದಿಯೇ ಆಗಬೇಕಾಗಿಲ್ಲ. ಬೇರುಗಳಂತೆ ನಾವು ಯಾವಾಗಲೂ ಭೂಮಿಯಲ್ಲಿ ಸ್ಥಿರವಾಗಿ ನಿಂತು, ಚಿಗುರೆಲೆಗಳಂತೆ ಯಾವಾಗಲೂ ಆಕಾಶದತ್ತ ನೋಡುತ್ತಾ ಎತ್ತರವಾಗಿ ಬೆಳೆಯಬೇಕು. ಇದು ಸತತವಾಗಿ ನಿರಂತರವಾಗಿ ಸಾಗಬೇಕು. ಆಗಲೇ ಬದುಕು ಸಾರ್ಥಕ.

# "ಕವ ನೊ ನಗರೆ" (ನದಿ ನೀರಿನ ಹರಿವು)

ಗುರುಪ್ರಸಾದ್

ಎನ್ ಕ  (Enka), ಜಪಾನಿನ ಸಾಂಪ್ರದಾಯಿಕ ಸಂಗೀತ ಶೈಲಿ. ಅರ್ಥಪೂರ್ಣ ಸಾಲುಗಳು ಹಾಗೂ ಭಾವಪೂರ್ಣ ಗಾಯನ ಈ ಶೈಲಿಯ ಹೆಗ್ಗುರುತು. ಕನ್ನಡದ ಭಾವಗೀತೆಗಳಿಗೆ ಹತ್ತಿರ ಎನ್ನಬಹುದು. ಹಿಬರಿ ಮಿಸೊರ ಸುಪ್ರಸಿದ್ಧ ಎನ್ ಕ ಹಾಡುಗಾರ್ತಿಯರಲ್ಲಿ ಒಬ್ಬರು. ಇವರು ಹಾಡಿರುವ "ಕವ ನೊ ನಗರೆ" (ನದಿ ನೀರಿನ ಹರಿವು) ನನ್ನ ಬಾಳ ಸಂಗಾತಿ ಸ್ಮಿತಳ ನೆಚ್ಚಿನ ಹಾಡು.

https://www.youtube.com/watch?v=d_Ns_B23LT0

**ಈ ಹಾಡಿನ ಭಾವಾನುವಾದ ಇಲ್ಲಿದೆ.**

ಬದುಕೆಂದರೆ ಹೀಗೇ ಅಲ್ಲವೇ
ಅರಿವಿಗೆ ಬಾರದು ನಡೆದು ಬಂದ ಹಾದಿ
ಹಿಂತಿರುಗಿ ನೋಡಿದರೆ ಅಗೋ ಅಲ್ಲಿ ದೂರದಲ್ಲಿ
ನನ್ನೂರಿನ ಕಿರು ಬೀದಿ

ಬದುಕೆಂದರೆ ಹೀಗೇ ಅಲ್ಲವೇ
ಯುಗ ಯುಗಾದಿ ಹರಿಯುತಿರುವ ನದಿ ನೀರಿನ ಜಾಡು
ಹಳ್ಳ ಕೊಳ್ಳಗಳ ತಿರುವು ಮುರುವುಗಳ
ನಕ್ಷೆಯಿರದ ಮೇಡು

ಬದುಕೆಂದರೆ ಹೀಗೇ ಅಲ್ಲವೇ
ಕೊನೆಯಿಲ್ಲದೆ ಹರಡಿಕೊಂಡ ನೀಲ ಬಾನಿನುನ್ಮಾದ
ಹರಿವ ತೊರೆಯ ಉದರದಿಂದ
ಜುಳು ಜುಳು ನಿನಾದ

ಬದುಕೆಂದರೆ ಹೀಗೇ ಅಲ್ಲವೇ
ಎಡೆಯಿಂದೆಡೆಗೆ ನಿಲ್ಲದ ಓಟ
ಜೀವಕೆ ಜೀವ ಜೊತೆಜೊತೆಯಾಗಿ
ಕನಸುಗಳ ಹುಡುಕಾಟ

ಬದುಕೆಂದರೆ ಹೀಗೇ ಅಲ್ಲವೇ
ಮಳೆಯಲಿ ನೆಂದು ತುಂಬಿದ ಕೆಸರು
ಕಾರ್ಮೋಡ ಸರಿದು ಬೆಳಕು ಸುರಿವುದ
ಕಾಯುತ ಕೂರುವ ಹಸಿರು

ಬದುಕೆಂದರೆ ಹೀಗೇ ಅಲ್ಲವೇ
ನದಿ ನೀರಿನ ಜಾಡು
ನಕ್ಷೆಯಿರದ ಮೇಡು

# ಇತಿಹಾಸದ ಉಪಯುಕ್ತ ಪಾಠಗಳು

ಹರಿಚರಣ್

ಯುಗಾದಿಯು ಹೊಸ ಸಂವತ್ಸರದ ಸಂಕೇತವಾಗಿ, ಪಂಚಾಂಗ ಶ್ರವಣದೊಂದಿಗೆ ಆರಂಭವಾಗುತ್ತದೆ. ಮನುಷ್ಯನಿಗೆ ಸ್ವಾಭಾವಿಕವಾಗಿ ಭವಿಷ್ಯದ ಬಗ್ಗೆ ಕುತೂಹಲವಿರುವದು ಸಹಜ. ಆದರೆ ನಾವು ಮುಖ್ಯವಾಗಿ ಇಲ್ಲಿ ಮಾಡಬೇಕಾದುದ್ದು ಸ್ವವಿಮರ್ಶೆ. ನಾವು ಇಲ್ಲಿಯವರೆಗೂ ನಡೆದುಬಂದ ಹಾದಿ ಎಂತಹದು, ನಾವು ಕಲಿತ ಪಾಠ, ನಮ್ಮಲಿ ನಾವು ತಂದುಕೊಳ್ಳಬೇಕಾದ ಪರಿವರ್ತನೆ ಇದೆಲ್ಲವೂ ಸ್ವವಿಮರ್ಶೆಯ ಭಾಗವಾಗುತ್ತದೆ. ಈ ನಿಟ್ಟಿನಲ್ಲಿ ನಾನು ನಮ್ಮಗೆ ಇತಿಹಾಸದಿಂದ ಉಪಯುಕ್ತವಾದದ್ದು ಏನಿರಬಹುದು, ಅದು ಸಾರುತ್ತಿರುವ ಸಂದೇಶವೇನೆಂದು ತಿಳಿಯಲು ಹೊರಟಾಗ ನನಗೆ ದೊರೆತ ಪುಸ್ತಕ **"ಇತಿಹಾಸದ ಪಾಠಗಳು".**

ನಮ್ಮ ಕಾಲದ ಶ್ರೇಷ್ಠ ಇತಿಹಾಸಗಾರರಲ್ಲಿ ವಿದ್ವತ್ ದಂಪತಿಗಳಾದ ವಿಲ್ ಡ್ಯುರಾಂಟ್ ಮತ್ತು ಏರಿಯಲ್ ಡ್ಯುರಾಂಟ್  ಶ್ರೇಷ್ಠ ಪಂಕ್ತಿಗೆ ಸೇರಿದವರು. ಅವರು ತಮ್ಮ ಜೀವಾವಧಿಯ ಧೀರ್ಘಕಾಲ ಇತಿಹಾಸದ ಸಂಶೋಧನೆಗೆ ತೆತ್ತು "ನಾಗರಿಕತೆಯ ಕಥೆ " ಎಂಬ ಬೃಹತ್ಸಂಪುಟವನ್ನು ಕೊಟ್ಟಿದಾರೆ. ಅದು ಹನ್ನೊಂದು ಸಂಪುಟಗಳಾಗಿ ಹೊರಬಂದು ಅದರ ಸಾರಾಂಶವಾಗಿ "ಇತಿಹಾಸದ ಪಾಠಗಳು" ಎಂಬ ಕೃತಿಯನ್ನು ಹೊರ ತಂದರು. ವೇದಕಾಲದ ಕಡೆಗೆ ಬಂದು ಅದರ ಇಡಿ ಮಹತ್ವ ಹಾಗು ತಿರುಳನ್ನು ಉಪನಿಷದ್ ಪ್ರತಿನಿಧಿಸಿದ್ಯೋ, "ಇತಿಹಾಸದ ಪಾಠಗಳು" ಕೂಡ ಅದರಂತೆಯೇ.

ಮೊದಲಿಗೆ ನಮಗೆ ಎಷ್ಟರ ಮಟ್ಟಿಗೆ ಹಿಂದೆ ಏನು ನಡೆದಿದೆ ಎಂಬುದು ಗೊತ್ತು? ಅಥವಾ ಇತಿಹಾಸವು ಎಲ್ಲರು ಸಮ್ಮತಿಸಲಾಗದ ಕಟ್ಟು ಕಥೆಯೇ? ಯಾವುದೇ ಗತಕಾಲದ ಘಟನೆಯ ಬಗ್ಗೆ ನಮ್ಮ ಅರಿವು ಅಪೂರ್ಣ. ನಿಷ್ಕ್ಪಷ್ಟವಲ್ಲದ, ಇಬ್ಬಗೆಯ ಸಾಕ್ಷಿ ಮತ್ತು ಪಕ್ಷಪಾತ ಇತಿಹಾಸಗಾರರಿಂದ ಮುಸುಕುಗೊಂಡು ಹಾಗು ಪ್ರಾಯಶಃ ನಮ್ಮದೇ ದೇಶಾಭಿಮಾನ ಅಥವಾ ಧರ್ಮ ಪಕ್ಷಪಾತದಿಂದ ತಿರುಚುಗೊಂಡಿರುತ್ತದೆ. ಬಹುತೇಕ ಇತಿಹಾಸವು ಊಹೆ ಮತ್ತೆ ಉಳಿದದ್ದು ಪೂರ್ವಾಗ್ರಹ.

ತನ್ನ ದೇಶ, ಜನಾಂಗ, ಮತ ಅಥವಾ ವರ್ಗದ ಪಕ್ಷಪಾತವನ್ನು ಮೀರಿ ನಿಂತ ಇತಿಹಾಸಗಾರನು ಕೂಡ ತನ್ನ ವಿಷಯದ ಬಗ್ಗೆ ಬೇಕಾಗಿರುವ ಸಾಮಗ್ರಿ ಮತ್ತೆ ಅವನ ಭಾಷಾ ವಿಶೇಷಣೆಗಳ ಸೂಕ್ಷ್ಮಗಳಿಂದ ಮೋಸ ಹೋಗುತ್ತಾನೆ. ಈ ಎಲ್ಲ ಕುಂದುಕೊರತೆಗಳನ್ನು ಗುರುತಿಸಿ ವಿನಮ್ರತೆಯಿಂದ ಮುಂದುವರೆದಿದ್ದಾರೆ ಈ ಕೃತಿಯಲ್ಲಿ. ಕೇವಲ ೧೦೦ಳ ಪುಟಗಳಲ್ಲಿ ಇತಿಹಾಸದಿಂದ ನಮಗೆ ಉಪಯುಕ್ತ ವಿಷಯ ಇದರಲ್ಲಿ ಅಡಕವಾಗಿದೆ. ಅದರ ಒಂದು ಚಿಕ್ಕ ಪರಿಚಯ ಈ ಲೇಖನ. ಇದರಲ್ಲಿ ವಿಷಯ ದೋಷಗಳು ಹಾಗು ಭಾಷಾ ನ್ಯೂನತೆಗಳು ಕಂಡು ಬಂದರೆ ಅದು ನನ್ನ ಇತಿಮಿತಿ.

ಮನುಷ್ಯನ ಇತಿಹಾಸ ಅಂತರಿಕ್ಷದಲ್ಲಿ ಒಂದು ಅಲ್ಪಕಾಲದ ನೆಲೆ ಮತ್ತು ಅದರ ಮೊದಲನೆಯ ಪಾಠ ನಮ್ರತೆ. ಯಾವುದೇ ಧೂಮಕೇತು ನಮ್ಮ ಭೂಮಿಗೆ ಹತ್ತಿರ ಬಂದು ನಮ್ಮ ಗ್ರಹದ ಚಲನವಲನಗಳನ್ನು ಏರುಪೇರು ಮಾಡಬಹುದು ಅಥವಾ ಇನ್ಯಾವುದೋ ಪ್ರಕೃತಿಯ ವಿಕೋಪ ನಮ್ಮ ಭೂಮಿಯನ್ನು ಅಸ್ತವ್ಯಸ್ತ ಮಾಡಬಹುದು. ಆದರೂ ಇದೆಲಾ ಸಾಧ್ಯತೆಗಳನ್ನು ಸ್ವೀಕರಿಸಿ ಬ್ರಹ್ಮಾಂಡದ ಕಡೆಗೆ ದಾಪುಗಾಲು ಹಾಕುತ್ತೇವೆ. ಇಲ್ಲಿ ಪ್ಯಾಸ್ಕಲ್ನ ಮಾತು ನೆನೆಯಬಹುದು "ಇಡೀ ಬ್ರಹ್ಮಾಂಡವು ಅವನನ್ನ ನುಚ್ಚು ನೂರು ಮಾಡಿದರು, ಮನುಷ್ಯನು ಯಾವುದರಿಂದ ಕೊಲ್ಲಲ್ಪಟ್ಟಿರುತ್ತಾನೋ ಅದಕ್ಕಿಂತ ಶ್ರೇಷ್ಠ ವಾಗಿರುತ್ತಾನೆ, ಯಾಕೆಂದರೆ ಅವನಿಗೆ ಅವನ ಸಾವಿನ ಅರಿವಿರುತ್ತದೆ. ಆದರೆ ಬ್ರಹ್ಮಾಂಡಕ್ಕೆ ಅದರ ವಿಜಯದ ಬಗ್ಗೆ ಏನು ಅರಿವಿರುವುದಿಲ್ಲ". ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಭೂಗೋಳದ ಪ್ರಾಬಲ್ಯ ಕ್ಷೀಣಿಸುತ್ತದೆ. ಪ್ರಾದೇಶಿಕ ಪ್ರಾಂತ್ಯದ ನೆಲಹರಹು ವ್ಯವಸಾಯ, ಗಣಿಗಾರಿಕೆ ಅಥವಾ ವಾಣಿಜ್ಯಕ್ಕೆ ಒದಗಿಬಂದರೂ, ಆ ಸಾಧ್ಯತೆಯನ್ನು ಸತ್ಯಸಂಗತಿ ಮಾಡುವುದು ನಾಯಕರ ಕಲ್ಪನಾಶಕ್ತಿ ಹಾಗು ಉದ್ಯಮಶೀಲತೆ. ಮನುಷ್ಯನಿಂದ ನಾಗರಿಕತೆಯೇ ಹೊರತು ಭೂಮಿಯಿಂದ ಅಲ್ಲ.

ಇತಿಹಾಸವು ಜೀವವಿಜ್ಞಾನದ ತುಣುಕು, ಮನುಷ್ಯ ಜೀವನ ಸಹಸ್ರಾರು ನೆಲ ಹಾಗು ಸಮುದ್ರ ಜೀವರಾಶಿಗಳ ಒಂದು ಭಾಗ. ಯಾವುದೋ ಒಂದು ದಟ್ಟ ಅರಣ್ಯಕ್ಕೆ ಕಾಲಿಟ್ಟರೆ ಗೊತ್ತಾಗುವುದು ನಾವು ಅಲ್ಪಸಂಖ್ಯಾತ ಜೀವ ರಾಶಿಗಳಲ್ಲಿ ಒಬ್ಬರು ಹಾಗು ನಮ್ಮ ಜೀವನ ಎಷ್ಟು ದುರ್ಬಲವೆಂಬುದು. ಆದ್ದರಿಂದ ಜೀವವಿಜ್ಞಾನದ ನಿಯಮಗಳು ಇತಿಹಾಸದ ಮೂಲಭೂತ ನಿಯಮಗಳು. ಇದರಲ್ಲಿ ಮೊದಲನೆಯ ಪಾಠ, ಬದುಕು ಒಂದು ಸ್ಪರ್ಧೆ. ಇಲ್ಲಿ ಸ್ಪರ್ಧೆ ಎಂಬುದು ಜೀವನದಲ್ಲಿನ ವ್ಯಾಪಾರವಲ್ಲ, ಜೀವನದ ವ್ಯಾಪಾರವೇ -ಆಹಾರ ಸಮೃದ್ಧಿಯಿಂದ ಇರುವಾಗ ಶಾಂತಿ; ತಿನ್ನುವ ಬಾಯಿ ಆಹಾರವನ್ನು ಮೀರಿದಾಗ ಹಿಂಸೆ. ಪ್ರಾಣಿಗಳು ಒಂದನ್ನೊಂದು ಮುಜುಗರವಿಲ್ಲದೆ ತಿನ್ನುತ್ತದೆ; ನಾಗರೀಕ ಮನುಷ್ಯರು ಒಬ್ಬರನ್ನೊಬ್ಬರು ಕಾನೂನಿನ ವ್ಯವಹಾರದಲ್ಲಿ ತಿನ್ನುತ್ತಾರೆ.

ಇತಿಹಾಸದ ಎರಡನೇ ಜೀವವಿಜ್ಞಾನದ ಪಾಠವೆಂದರೆ ಬದುಕು ಒಂದು ಆಯ್ಕೆ. ಆಹಾರ ಅಥವಾ ಸಂಗಾತಿಯ ಅಥವಾ ಅಧಿಕಾರದ ಸ್ಪರ್ಧೆಯಲ್ಲಿ ಕೆಲವು ಜೀವಿಗಳು ಗೆಲ್ಲುತ್ತವೆ ಮತ್ತೆ ಕೆಲುವು ಸೋಲುತ್ತವೆ. ಉಳಿವಿನ ಈ ಸ್ಪರ್ಧೆಯಲ್ಲಿ ಕೆಲವರು ಬೇರೆಯವರಿಗಿಂತ ಹೆಚ್ಚು ಶಕ್ತರಾಗಿರುತ್ತಾರೆ. ಸಮಾನತೆಯ ಕಲ್ಪನಾಲೋಕ ಜೀವಶಾಸ್ತ್ರದಲ್ಲಿ ನಿಲ್ಲತಕ್ಕದಲ್ಲ. ಈ ಅಸಮಾನತೆ ಸ್ವಾಭಾವಿಕ ಮಾತ್ರವಲ್ಲ ಅದು ಜನ್ಮಜಾತ ಹಾಗು ನಾಗರಿಕತೆಯ ಜಟಿಲತೆಯ ಜೊತೆಗೆ ಬೆಳೆಯುತ್ತದೆ.

ಇತಿಹಾಸದ ಮೂರನೇ ಜೀವವಿಜ್ಞಾನದ ಪಾಠ - ಜೀವವು ವಂಶವನ್ನು ವೃದ್ಧಿಗೊಳಿಸಬೇಕು. ಪ್ರಕೃತಿಯಲ್ಲಿ ಯಾವ ಜೀವರಾಶಿಗೆ ಸಮೃದ್ಧವಾಗಿ ಪುನರುತ್ಪಾದಿಸುವ ಸಾಮರ್ಥ್ಯವಿರುವುದಿಲ್ಲವೋ ಅದಕ್ಕೆ ಉಪಯೋಗವಿಲ್ಲ. ಅವಳಿಗೆ ಗುಣಮಟ್ಟಕ್ಕಿಂತ ಪ್ರಮಾಣವೇ ಆದ್ಯತೆ. ಅವಳಿಗೆ ವಂಶವು ಒಬ್ಬ ವ್ಯಕ್ತಿಗಿಂತ ಮುಖ್ಯವಾಗುತ್ತದೆ, ನಾಗರಿಕತೆ ಹಾಗು ಬರ್ಬರತೆಯ ನಡುವೆ ಯಾವುದೇ ತಾರತಮ್ಯ ಮಾಡುವುದಿಲ್ಲ. ಹೆಚ್ಚಿನ ಜನ ಪ್ರಮಾಣದೊಂದಿಗೆ ನಾಗರಿಕತೆಯ ಸಂಸ್ಕೃತಿಯು ಇಳಿಮುಖಗೊಳುತ್ತದೆ ಹಾಗು ಕಡಿಮೆ ಜನ ಪ್ರಮಾಣದೊಂದಿಗೆ ಸಂಸ್ಕೃತಿಯು ಉತ್ಕೃಷ್ಟವಾಗಿರುತ್ತದೆ ಎಂಬುದು ಅವಳ ಗಣನೆಗೆ ಬಾರದು. ಹೀಗೆ ಇತಿಹಾಸದಂತಹ ಹಾಸ್ಯಗಾರ ಮತ್ತೊಬ್ಬನಿಲ್ಲ.

ಸಮಾಜವು ಆದರ್ಶದ ಮೇಲೆ ನಿರ್ಮಾಣವಾಗುವುದಿಲ್ಲ, ಅದು ಮನುಷ್ಯನ ಸ್ವಭಾವ ಮತ್ತೆ ಅವನ ರಚನೆಯೊಂದಿಗೆ ರೂಪಗೊಳ್ಳುತ್ತದೆ. ಹಾಗಾದರೆ ಅವನ ರಚನೆ ಎಂತಹದು ಹಾಗು ಅವನ ಸ್ವಭಾವವು ಇತಿಹಾಸದೊಂದಿಗೆ ಬದಲಾಗಿದೆಯೇ? ಎಂಬುದು ಸಾಮಾನ್ಯ ಪ್ರಶ್ನೆ. ಮನುಷ್ಯನ ಬೆಳವಣಿಗೆ ಜೈವಿಕಕ್ಕಿಂತಲೂ ಸಾಮಾಜಿಕವಾದುದು. ಈ ಸಾಮಾಜಿಕ ಬೆಳವಣಿಗೆ, ಸಂಪ್ರದಾಯ ಮತ್ತೆ ಹೊಸತನದ ಅನ್ಯೋನ್ಯ ಕ್ರಿಯೆಯಿಂದ ಉಂಟಾಗುವುದು. ಹೊಸತನವು ಬುದ್ಧಿಶಕ್ತಿಯ ಉತ್ಪತ್ತಿ, ಅದು ಪ್ರಬಲವಾಗಿ ಇರುವುದಲ್ಲದೆ ವಿನಾಶಕಾರಕವು ಆಗಬಹುದು.

ನೈತಿಕತೆ ಅಥವಾ ಮಾನವೀಯ ಮೌಲ್ಯಗಳು ಇತಿಹಾಸದಲ್ಲಿ ಕಾಲಕ್ಕೆ ಅನುಗುಣವಾಗಿ ಒಂದಷ್ಟು ಬದಲಾವಣೆಗಳನ್ನು ಹೊಂದಿವೆ. ಬಹುಶ: ಪ್ರತಿ ದೋಷವು ಯಾವುದೋ ಒಂದು ಕಾಲದಲ್ಲಿ ಸದ್ಗುಣವಾಗಿದ್ದು ಒಬ್ಬ ವ್ಯಕ್ತಿ, ಕುಟುಂಬ ಅಥವಾ ಒಂದು ಗುಂಪಿನ ಉಳಿಯುವಿಕೆಗೆ ಅತ್ಯವಶ್ಯವಾಗಿದ್ದಿರಬಹುದು. ಮನುಷ್ಯನ ಪಾತಕಗಳು ಅವನ ಪತನದ ಕಳಂಕವಲ್ಲದೆ ಅವನ ಏಳಿಗೆಯ ಕುರುಹುಗಳಾಗಿರಬಹುದು. ನಾವು ಪದೇ ಪದೇ ನೆನಪು ಮಾಡುಕೊಳ್ಳಬೇಕಾದ್ದು ಏನೆಂದರೆ ಇತಿಹಾಸವನ್ನು ಬರೆದಿರುವದಕ್ಕು ಅದು ನಡೆದದ್ದಕ್ಕೂ ವ್ಯತ್ಯಾಸವಿರುವುದು; ಇತಿಹಾಸಗಾರನು ಅಸಾಧಾರಣವಾದುದನ್ನು ದಾಖಲಿಸುವನು. ಯಾಕೆಂದರೆ ಅದು ಸ್ವಾರಸ್ಯವಾದುದ್ದು ಮತ್ತು ಅನನ್ಯಸಾಧಾರಣ. ಆದ್ದರಿಂದ ನಾವು ನಮ್ಮ ಕಾಲದ ನೈತಿಕ ಅಸಡ್ಡೆಯನ್ನು ಅದರ ಕ್ಷೀಣತೆ ಇಲ್ಲವೇ ಕೃಷಿ ಆಧಾರಿತ ಸಮಾಜದಿಂದ ಕೈಗಾರಿಕೆ ಆಧಾರಿತ ಸಮಾಜದ ಸಂತೋಷಕರ ಮಾರ್ಪಾಟು ಹೊಂದುತ್ತಿರುವ ಸಸ್ತನಿ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಯಾವ ಒಬ್ಬ ಮನುಷ್ಯನೂ, ಎಷ್ಟೇ ಬುದ್ಧಿವಂತನು ಅಥವಾ ಬಹುಶ್ರುತನಾಗಿದ್ದರು, ಒಂದು ಜೀವಾವಧಿಯಲ್ಲಿ ಪೂರ್ಣ ತಿಳುವಳಿಕೆ ಹೊಂದಿದ್ದು ಸಂಪ್ರದಾಯ ಮತ್ತೆ ಸಾಮಾಜಿಕ ಸಂಸ್ಥೆಯ ಬಗ್ಗೆ ನಿಸ್ಸಂದೇಹವಾದ ತೀರ್ಮಾನದಿಂದ ನಿರ್ಲಕ್ಷಿಸಲು ಸಾಧ್ಯವಿಲ್ಲ, ಯಾಕೆಂದರೆ ಅದು ಇತಿಹಾಸದ ಪ್ರಯೋಗಶಾಲೆಯಲ್ಲಿ ಶತಮಾನಗಳಿಂದ ನಡೆದ ಪ್ರಯೋಗದ ವಿವೇಕ ಸಾರ. ಹೀಗಾಗಿ ಒಬ್ಬ ಸಂಪ್ರದಾಯವಾದಿ ಕ್ರಾಂತಿವಾದಿಯಷ್ಟೇ ಅಮೂಲ್ಯನು - ಪ್ರಾಯಶಃ ಇನ್ನು ಹೆಚ್ಚಾಗಿ, ಯಾಕೆಂದರೆ ಬೇರು ಕಸಿಗಿಂತ ಪರಮೋಚ್ಚ. ಹೊಸ ವಿಚಾರಗಳನ್ನು ಎಲ್ಲರ

ಉಪಯೋಗಕ್ಕಾಗಿ ಕೇಳಬೇಕು. ಆದರೆ ಅದು ಎಲ್ಲರ ಆಕ್ಷೇಪಣೆ, ವಿರೋಧದ ಬೆಂಕಿಯಲ್ಲಿ ಬೆಂದು, ಬದುಕಿ ಉಳಿದು ಮನುಕುಲವನ್ನು ಸೇರಬೇಕು. ಹಳೆಯದು ಹೊಸದನ್ನು ಪ್ರತಿಭಟಿಸಬೇಕು ಹಾಗು ನವೀನವು ಹಳೆಯದನ್ನು ಪ್ರಚೋದಿಸಬೇಕು, ಈ ಬಿಗಿತದ ಪರಿಣಾಮ ಕ್ರಿಯಾತ್ಮಕ ಕರ್ಷಕ ಶಕ್ತಿ, ಉತ್ತೇಜಿತ ಅಭಿವೃದ್ಧಿ, ಮೂಲಭೂತ ಐಕ್ಯತೆ ಹಾಗು ಸಮಸ್ತದ ಚಲನೆ.

ಒಬ್ಬ ಮನುಷ್ಯನು ಅದೃಷ್ಟವಂತನಾಗಿದ್ದರೆ, ಅವನ ಬದುಕಿನಲ್ಲಿ ಅವನಿಗೆ ಸಾಧ್ಯವಾದಷ್ಟು ಅವನ ಶ್ರೀಮಂತ ಪರಂಪರೆಯ ಪ್ರಾಪ್ತಿ ಹೊಂದಿ ಅವನ ಮಕ್ಕಳಿಗೆ ತಲುಪಿಸಲು ಸಾಧ್ಯವಾಗುವುದು . ಅವನ ಕಡೆಯ ಉಸಿರಿನಲ್ಲಿ ಅವನಿಗೆ ಕೃತಜ್ಞಾಭಾವ ಬರುವುದು, ಈ ಅಕ್ಷಯ ಪರಂಪರೆಯು ನಮ್ಮ ತಾಯಿಯಂತೆ ಪೋಷಿಸುವುದು ಮತ್ತೆ ಸ್ಥಿರವಾದುದು ಎಂಬ ಜ್ಞಾನದಿಂದ. ಹೀಗಾಗಿ ನಾವು ನಮ್ಮ ಎಲ್ಲ ಪೂರ್ವಿಕರು ನಮಗೆ ಕಲ್ಪಿಸಿಕೊಟ್ಟ ಸಂಸ್ಕಾರಗಳನ್ನು ಸ್ಮರಿಸುತ್ತ, ಶ್ರದ್ಧಾಜಾಡ್ಯವಿಲ್ಲದೆ ಪ್ರಗತಿಯ ಕಡೆಗೆ ನಡೆಯೋಣ.

## ಬೇರು-ಚಿಗುರು

ಪೂರ್ಣಿಮಾ ಸುಬ್ರಹ್ಮಣ್ಯ

ಬೇರಿಗೆ ನಲವತ್ತು
ಎಳೆಬಿಸಿಲಿಗೆ ಟಿಸಿಲೊಡೆದು
ಹೊಮ್ಮಿತ್ತು ಉಸಿರು!

ಚಿಗುರಿಗೋ ನಲವಿತ್ತು
ಎಳೆಬಿಸಿಲಿಗೆ ಟಿಸಿಲೊಡೆದು
ಚಿಮ್ಮುತಿತ್ತು ಹಸಿರು!

ಆಳಕ್ಕೆ ಮೈಯೂರಿ
ಮಣ್ಣಸಾರವ ಹೀರಿ
ಅಸ್ತಿತ್ವ ತವಕ!

ಆಗಸಕೆ ಮೈದೋರಿ
ತನ್ನ ಇರುವಿಕೆ ಸಾರಿ
ಅವಕಾಶ ಪುಳಕ!

ಬೆಳಕಿಗೆ ಹಾತೊರೆವುದಲ್ಲ,
ನೆಲದಾಳದಲಿ ನೋಂತು
ನೆಲೆನಿಂತ ಮೃದ್ಗಂಧ!

ಮಣ್ಣಿನ ಸ್ಪರ್ಶ ಬೇಡುವುದಿಲ್ಲ,
ನೀಲದಲಿ ನಲಿದಾಡಿ
ಸೂಸುವುದು ಹೂಗಂಧ!

ಚೈತ್ರಪಥ ಚಾರಣಕೆ
ವಿಳಂಬಿಸದೆ ಮತ್ತೂ,
ಯುಗಾದಿ ಬಂದಿತ್ತು!

ಹೊಸಚಿಗುರು – ಹಳೆಬೇರು
ಪ್ರಕೃತಿಯ ಮಹತ್ತು!
ಇದು, ನಲಿವ ಹೊತ್ತು!!

# ರಜೆಯ ಮಜಾ



ಅನಘ ಪ್ರಸಾದ್